



# ಕಿಚನ್‌ನಲ್ಲಿ ಕ್ರಾಂತಿ



**ಪ್ರಯೋಗ ಶಾಲೆಯಾದ ಪಾಕಶಾಲೆ!**

ಅಡುಗೆ ಮಾಡುವುದು ಹೇಳಿದಷ್ಟು ಸುಲಭದ ಮಾತಲ್ಲ. ಹದ ತಪ್ಪಿದರೆ ರುಚಿಯೇ ಹೋಗುತ್ತದೆ. ಉಪ್ಪು, ಹುಳಿ, ಖಾರ, ಸಿಹಿ ಸರಿಯಾಗಿ ಹೊಂದಿಕೊಂಡರೆ ಮಾತ್ರ ಅಡುಗೆಗೊಂದು ಘನತೆ. ಈ ಲಾಕ್‌ಡೌನ್ ಸಮಯದಲ್ಲಿ ಅಡುಗೆಮನೆ ನನ್ನಿಷ್ಟದ ಜಾಗವಾಗಿತ್ತು. ಒಂದು ರೀತಿ ಪ್ರಯೋಗಶಾಲೆ ಎನ್ನಬಹುದು. ನನ್ನಿಷ್ಟದ ಅಡುಗೆಯನ್ನು ಮನೆಯಲ್ಲಿರುವ ವಸ್ತುಗಳನ್ನು ಬಳಸಿಕೊಂಡು ಮಾಡಿ ಮನೆಯವರಿಗೆ ಬಡಿಸುವುದು ಒಂದು ರೀತಿಯ ಖುಷಿ ಕೊಟ್ಟ ಸಂಗತಿ. ತಂದೂರಿ ಚಿಕನ್, ಮಸಾಲ ಫಿಶ್ ಫ್ರೈ, ನಾಟಿ ಕೋಳಿ ಸಾರು, ಜತೆಗೆ ರಾಗಿ ಸಂಡಿಗೆ, ಅಕ್ಕಿ ಹಪ್ಪಳ ಕೂಡ ಮಾಡಿದೆ. ಅಡುಗೆ ಮಾಡುವುದು ಇಷ್ಟ. ಪಾತ್ರೆ ತೊಳೆಯುವುದು ಮಾತ್ರ ಕಷ್ಟ!

—ಯೋಗೀಶ್ ಎಂ.ಶೆಟ್ಟಿ, ಯಡ್ತಾಡಿ

ಕುಳಿತು ಆರ್ಡರ್ ಮಾಡಿದ ಕ್ಷಣಾರ್ಧದಲ್ಲೇ ಬೆಲ್ ಬಾರಿಸುತ್ತಿದ್ದ ಪಿಜ್ಜಾ ಬಾಯ್... ಎಲ್ಲವೂ ಒಮ್ಮೆಲೆಯೇ ಸ್ತಬ್ಧಗೊಂಡಿದ್ದವು.

ಬಾಯಿ ರುಚಿ ಕೇಳಬೇಕಲ್ಲ. ಆಗ ತಂತಾನೇ ಕಾಲುಗಳು ಅಡುಗೆಮನೆಯತ್ತ ನಡೆದವು. ಜತೆಗೆ ಯೂಟ್ಯೂಬ್ 'ಗೆಳೆಯ', 'ಗೆಳತಿ'ಯರೂ ಸಾಥ್ ನೀಡಿದರು. ದಿನಕ್ಕೊಂದು ಹೊಸ ರೆಸಿಪಿ ಹೊತ್ತು ಫೋನ್‌ಗಳಿಗೆ ದಾಂಗುಡಿ ಇಡುತ್ತಿದ್ದ 'ಗೆಳತಿಯರು' ದಿನ ದಿನ ಹೊಸ ರುಚಿ ತಯಾರಿಸಿ ಸವಿಯಲು ಪ್ರೇರೇಪಿಸಿದರು. ಬೇಕರಿ, ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಸಿಗುತ್ತಿದ್ದ ತರಹೇವಾರಿ ತಿನಿಸು ಅಡುಗೆಮನೆಯಲ್ಲಿ ಸಿದ್ಧಗೊಳ್ಳತೊಡಗಿದವು.

ಮನೆಯೊಡತಿಯರು ತಮ್ಮ ಕೈರುಚಿ ತೋರಿಸಿ ಮನೆಯವರನ್ನೆಲ್ಲ ತೃಪ್ತಿಪಡಿಸಿ ಭೇಷ್ ಎನಿಸಿಕೊಂಡರು. ಎಂದೂ ಅಡುಗೆಮನೆಯತ್ತ ಮುಖಮಾಡದ ಹೆಣ್ಣಮಕ್ಕಳು ತಾಸುಗಟ್ಟಲೆ ಇಷ್ಟದ ಪಾಕ ತಯಾರಿಯಲ್ಲಿ ನಿರತರಾದರು. ನಾವೇನೂ ಕಮ್ಮಿ ಇಲ್ಲ ಎಂಬಂತೆ ಪುರುಷರೂ ತರಹೇವಾರಿ ಅಡುಗೆ ಮಾಡಿ ಖುಷಿಪಟ್ಟರು. ಎಲ್ಲರ ವಾಟ್ಸ್‌ಆ್ಯಪ್ ಸ್ಟೇಟಸ್, ಫೇಸ್‌ಬುಕ್, ಇನ್‌ಸ್ಟಾಗ್ರಾಂನಲ್ಲಿ ತಾವೇ ಸಿದ್ಧಪಡಿಸಿದ ತಿನಿಸುಗಳ ಫೋಟೊ ಹಾಕಿ ಬೀಗಿದರು. ಇಷ್ಟುದಿನ ಬೇರೆಯವರ ಕೈರುಚಿ ಸವಿಯುತ್ತಿದ್ದ ಬಹುತೇಕರು ತಮ್ಮದೇ ಕೈರುಚಿ ಸವಿದು ಪುಳಕಗೊಂಡರು.

ಬೆರಳತುದಿಯಲ್ಲೇ ಬೇಕೆನಿಸಿದ ತಿನಿಸಿನ ರೆಸಿಪಿ ಸಿಕ್ಕಮೇಲೆ ಕೇಳಬೇಕೆ. ಲಾಕ್‌ಡೌನ್‌ನ 45 ದಿನವೂ ಹೊಸ ಹೊಸ ಬಗೆಯ ತಿನಿಸು ಮಾಡಿ ಮನೆ ಮಂದಿಗೆ ಹೊಸ ರುಚಿ ತೋರಿಸಿದರು. ಇದರ ಪರಿಣಾಮ ಮಾರ್ಚ್, ಏಪ್ರಿಲ್, ಮೇ ತಿಂಗಳ ಲಾಕ್‌ಡೌನ್ ಅವಧಿಯಲ್ಲಿ ಯೂಟ್ಯೂಬ್ ಬಳಕೆದಾರರ ಸಂಖ್ಯೆ ಗಣನೀಯವಾಗಿ ಏರಿತು. ಈ ಅವಧಿಯಲ್ಲಿ ಯೂಟ್ಯೂಬ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಬಳಕೆದಾರರ ಸಂಖ್ಯೆ ಶೇ 20.5ರಷ್ಟು